KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜೂನ್ ೨, ೨೦೧೧ (ಜ್ಯೇಷ್ಠ ೧೨, ಶಕ ವರ್ಷ ೧೯೩೩)	ಸಂಚಿಕೆ ೨೨

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಸಿಒ 05 ಸಿಎಸ್‌ಎಸ್ 2011, ಬೆಂಗಳೂರು, ದಿನಾಂಕ: 21ನೇ ಫೆಬ್ರವರಿ, 2011

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಹಳಿಯಾಳ, ಜೋಯಿಡಾ ಮತ್ತು ಭಟ್ಕಳ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಉತ್ತರ ಕನ್ನಡ ಜಿಲ್ಲೆ ಇವುಗಳ ಆಡಳಿತ ಮಂಡಳಿಗಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಹಳಿಯಾಳ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,

1) ಶ್ರೀ ಪಿ.ಸಿ. ದೇಸಾಯಿ, ದೇಸಾಯಿ ಗಲ್ಲಿ, ಹಳಿಯಾಳ.

ಜೋಯಿಡಾ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,

1) ಶ್ರೀ ಸದಾಶಿವ ಕಮಲಾಕರ ದೇಸಾಯಿ, ಯರಮುಖ, ಗುಂದ ಜೋಯಡಾ

ಭಟ್ಕಳ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,

1) ಶ್ರೀ ಮುಕುಂದ ಮಂಜುನಾಥ ನಾಯ್ಕ ಶಾರದಹೊಳೆ ಶಿರಾಲಿ, ಭಟ್ಕಳ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ,

ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್.176

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 68 ವೆಚ್ಚ–12/11, ಬೆಂಗಳೂರು, ದಿನಾಂಕ:21.02.2010

ಅಂಗವಿಕಲರು ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯು ಅನುಷ್ಠಾನಗೊಳಿಸುವ 'Non Governmental Institutions for Physically Handicapped' ಯೋಜನೆಯ ಮೌಲ್ಯಮಾಪನ ಕಾರ್ಯವನ್ನು ₹.4.87 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ISEC ಸಂಸ್ಥೆಗೆ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.164

ಹೆಚ್. ಶೇಖರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 233 ವೆಚ್ಚ–12/11, ಬೆಂಗಳೂರು, ದಿನಾಂಕ:01.03.2011

ಮೇಲುಕೋಟೆಯ ವೈರಮುಡಿ ಉತ್ಸವದ ಸಂದರ್ಭದಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಗಳನ್ನು ನೇರವಾಗಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಈ ಕಾರ್ಯವನ್ನು ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮ ಮತ್ತು ನಿಯಮಗಳನ್ನು ಪಾಲಿಸಬೇಕು. ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.182

ಹೆಚ್. ಶೇಖರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 55 ವೆಚ್ಚ–12/11, ಬೆಂಗಳೂರು, ದಿನಾಂಕ:04.02.2011

ವಾಣಿಜ್ಯ ತೆರಿಗೆ ಇಲಾಖೆಯ ಎರಡು ಕಟ್ಟಡಗಳ ಭದ್ರತಾ ವ್ಯವಸ್ಥೆಗಾಗಿ ಸೈನಿಕ್ ವೆಲ್‌ಫೇರ್ ಸೊಸೈಟಿ ಮುಖಾಂತರ 9 ಜನ ನಿವೃತ್ತ ಸೈನಿಕರ ಸೇವೆಯನ್ನು ರೂ.7,71,660.00 ಗಳ ವಾರ್ಷಿಕ ಅಂದಾಜು ವೆಚ್ಚದಲ್ಲಿ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸರ್ಕಾರವು ವಾಣಿಜ್ಯ ತೆರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ವಾಣಿಜ್ಯ ತೆರಿಗೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.102

ಹೆಚ್. ಶೇಖರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 53 ವೆಚ್ಚ–12/11, ಬೆಂಗಳೂರು, ದಿನಾಂಕ:04.02.2011

ರಾಜ್ಯದ ತೆರಿಗೆ ಆದಾಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿರುವ ಒಟ್ಟು 225 ಎಲೆಕ್ಟ್ರಾನಿಕ್ ಟ್ಯಾಕ್ಸ್ ರಿಜಿಸ್ಟರ್ (ETR) ಯಂತ್ರಗಳನ್ನು ನೇರವಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL) ನಿಂದ ಒಟ್ಟು ರೂ.49,99,300/–ಗಳ ವೆಚ್ಚದಲ್ಲಿ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ

ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸರ್ಕಾರವು ಆರ್ಥಿಕ ಇಲಾಖೆ/ ವಾಣಿಜ್ಯ ತೆರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಯಂತ್ರಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಆರ್ಥಿಕ ಇಲಾಖೆ/ ವಾಣಿಜ್ಯ ತೆರಿಗೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.101

ಹೆಚ್. ಶೇಖರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಪಜೀ 32 ಎಫ್‌ಎಎಫ್ 2006, ಬೆಂಗಳೂರು, ದಿನಾಂಕ:19–01–2007

1963ನೇ ಇಸವಿಯ ಕರ್ನಾಟಕ ಅರಣ್ಯ ಕಾಯ್ದೆ (1964ನೇ ಇಸವಿಯ ಕರ್ನಾಟಕ ಅರಣ್ಯ ಅಧಿನಿಯಮ–5) 4ನೇ ಪ್ರಕರಣದ ನಿಯಮಗಳ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರವು ಈ ಮೂಲಕ:

1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಸಾಸಲು ಹೋಬಳಿ, ಸುತ್ತಳ್ಳಿ ಗ್ರಾಮದ ಜಮೀನನ್ನು ಇದಕ್ಕೆ ಲಗತ್ತಾಗಿರುವ ಅನುಸೂಚಿಯಲ್ಲಿ ವಿವರಿಸಲ್ಪಟ್ಟಿರುವ ಚಕ್ಕುಬಂದಿಯುಳ್ಳ ಪ್ರದೇಶವನ್ನು "ಮೀಸಲು ಅರಣ್ಯ"ವನ್ನಾಗಿ ಘೋಷಿಸಲು ಉದ್ದೇಶಿಸಿದೆ.

2) ಮೇಲ್ಕಂಡ ಪ್ರಕರಣದ 1 (ಸಿ) ಕಲಂನ್ನನುಸರಿಸಿ ಕರ್ನಾಟಕ ರಾಜ್ಯ ಸರ್ಕಾರದವರು ಅಂತಹ ಎಲ್ಲೆಗಳ ಒಳಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂತಹ ಜಮೀನಿನ ಯಾವುದಾದರೂ ಅರಣ್ಯ ಉತ್ಪತ್ತಿಗೆ ಹಕ್ಕು ಬಾಧ್ಯತೆ ಇರುವ ಅಥವಾ ಹಕ್ಕು ಬಾಧ್ಯತೆ ಇದೆ ಎಂದು ಹೇಳುವ ಯಾವ ವ್ಯಕ್ತಿಗಾದರೂ, ಯಾವುದಾದರೂ, ಹಕ್ಕು ಬಾಧ್ಯತೆಗಳಿದೆಯೇ? ಅವುಗಳ ಸ್ವಭಾವವೇನು? ಮತ್ತು ಅವು ಎಷ್ಟರ ಮಟ್ಟಿನವು ಎಂಬ ಅಂಶಗಳನ್ನು ವಿಚಾರಣೆ ಮಾಡಿ, ನಿಶ್ಚಿಯಿಸಿ ಅವುಗಳ ವಿಷಯದಲ್ಲಿ ಮೇಲ್ಕಂಡ ಅಧಿನಿಯಮದ ಎರಡನೇ ಅಧ್ಯಾಯದಲ್ಲಿ ವಿಧಿಸಿರುವಂತೆ ಕ್ರಮ ನಡಿಸುವುದಕ್ಕೆ ಬೆಂಗಳೂರು ಗ್ರಾಮಾಂತರ ಉಪ ವಿಭಾಗದ ಸಹಾಯಕ ಆಯುಕ್ತರು (ಅಸಿಸ್ಟೆಂಟ್ ಕಮೀಷನರ್) ರವರನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನಾಗಿ, ನೇಮಿಸಿದೆ. ಅಧಿಸೂಚನೆಯಾದ ದಿನಾಂಕದಿಂದ ಒಂದು ವರ್ಷದೊಳಗೆ ಪ್ರದೇಶದ ಹಕ್ಕು ಬಾಧ್ಯತೆಯನ್ನು ಇತ್ಯರ್ಥಗೊಳಿಸುವುದು.

3) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ರವರಿಗೆ ಈ ವಿಚಾರಣೆಯಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಸರ್ಕಾರದ ಪರವಾಗಿ ಸಹಾಯ ಮಾಡಲು ಹಾಜರಾಗಬೇಕೆಂದು ಸರ್ಕಾರ ಆದೇಶಿಸಿದೆ ಮತ್ತು ಅಧಿಸೂಚಿಯಲ್ಲಿ ತಿಳಿಸಿರುವ ಪ್ರದೇಶವನ್ನು ಒತ್ತುವರಿಯಾಗದಂತೆ ರಕ್ಷಣೆ ಮಾಡುವಂತೆಯೂ ನಿರ್ದೇಶಿಸಿದೆ.

4) ಮೇಲ್ಕಂಡ ಅಧಿನಿಯಮ 11, 12 ಮತ್ತು 14ನೇ ಪ್ರಕರಣಗಳ ಪ್ರಕಾರ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಯಾವುದೇ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗಾಗಿ ಬಾಧಿತರಾದ ವ್ಯಕ್ತಿಗಳು ಸಲ್ಲಿಸಿದ ಮೇಲ್ಮನವಿಗಳನ್ನು ಪರಿಶೀಲಿಸಲು ಸದರಿ ಅಧಿನಿಯಮ ಪ್ರಕರಣ 16(1)ನೇ ಪ್ರಕಾರ ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್ ನ್ಯಾಯ ಮಂಡಲಿಗೆ ಅಧಿಕಾರವಿರುತ್ತದೆ.

5) ಮೇಲ್ಕಂಡ ಅಧಿನಿಯಮ 15ನೇ ಪ್ರಕರಣದ ಪ್ರಕಾರ ಭಾದಿತವಾದ ಯಾವುದೇ ವ್ಯಕ್ತಿಯ ಸದರಿ ಅಧಿನಿಯಮದ ಪ್ರಕರಣ 16(2)ನೇ ಪ್ರಕಾರ ಆದೇಶ ಹೊರಡಿಸಿದ ದಿನಾಂಕದಿಂದ 3 ತಿಂಗಳೊಳಗೆ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬಹುದು.

ಅನುಸೂಚಿ

ಜಿಲ್ಲೆಯ ಹೆಸರು	ಬೆಂಗಳೂರು ಗ್ರಾಮಾಂತರ
ತಾಲ್ಲೂಕಿನ ಹೆಸರು	ದೊಡ್ಡಬಳ್ಳಾಪುರ
ಹೋಬಳಿಯ ಹೆಸರು	ಸಾಸಲು
ಗ್ರಾಮದ ಹೆಸರು	ಸುತ್ತಳ್ಳಿ
ಕ್ಷೇತ್ರದ ಸರ್ವೆ ನಂಬರು	7
ಚಕ್ಕುಬಂದಿ	ಉತ್ತರಕ್ಕೆ: ಉಜನಿ ಗ್ರಾಮ ಗಡಿ, ಪೂರ್ವಕ್ಕೆ: ಚೀಲೇನಹಳ್ಳಿ (ಮುದ್ದೇನಹಳ್ಳಿ ಎಸ್.ಎಫ್) ದಕ್ಷಿಣಕ್ಕೆ:ಬೈರಾಪುರ ಗ್ರಾಮ ಪಶ್ಚಿಮಕ್ಕೆ: ಕಂದಾಯ ಭೂಮಿ
ವಿಸ್ತೀರ್ಣ ಹೆಕ್ಟೇರುಗಳಲ್ಲಿ	46.00 ಹೆ.
ಕ್ಷೇತ್ರದ ಹೆಸರು	ಸುತ್ತಳ್ಳಿ ಗ್ರಾಮ ಸರ್ವೆ ನಂ.7ರ ಬ್ಲಾಕ್ 1 ಮತ್ತು 2.

ಬ್ಲಾಕ್–1

ಉತ್ತರ: ಸರ್ವೆ ರೇಖೆಯು ಚೀಲೇನಹಳ್ಳಿ ಗ್ರಾಮ ಸರ್ವೆ ನಂ.7ರ ಉತ್ತರಾದ್ರಿ ಮೂಲೆಯಿಂದ ನೈರುತ್ಯಕ್ಕೆ ಸುಮಾರು 26 ಚೈನುಗಳ ದೂರದ ಸರ್ವೆ ಸ್ಥಳ 1 ರಿಂದ ಪ್ರಾರಂಭಗೊಂಡು ಆಗ್ನೇಯ ಹಾಗೂ ದಕ್ಷಿಣಾಭಿಮುಖವಾಗಿ ಚಲಿಸಿ ಸರ್ವೆ ನಂ.10 ವಾಯುವ್ಯಮೂಲೆಯ ಸರ್ವೆ ಸ್ಥಳ 5ನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
1–2	126^0	6.00
2–3	208^0	7.50
3–4	121^0	7.00
4–5	191^0	3.00

ಪೂರ್ವ: ಸರ್ವೆ ರೇಖೆಯು ಸರ್ವೆಸ್ಥಳ 5 ರಿಂದ ಸರ್ವೆ ನಂಬರ್ 10ರ ಪಶ್ಚಿಮರೇಖೆ ಸರ್ವೆ ನಂಬರ್ 12ರ ಉತ್ತರ ಮತ್ತು ಪಶ್ಚಿಮರೇಖೆ, ಸರ್ವೆ ನಂಬರ್ 13ರ ಪಶ್ಚಿಮರೇಖೆ ಸರ್ವೆ ನಂಬರ್ 15ರ ಉತ್ತರ ಮತ್ತು ಪಶ್ಚಿಮರೇಖೆಯಲ್ಲಿ ಚಲಿಸಿ ಸರ್ವೆ ನಂಬರ್ 15ರ ನೈರುತ್ಯಮೂಲೆ ಸರ್ವೆಸ್ಥಳ 11 ನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
5–6	164^0	6.50
6–7	260^0	9.50
7–8	186^0	9.00
8–9	201^0	4.00
9–10	272^0	5.00
10–11	196^0	7.00

ದಕ್ಷಿಣಕ್ಕೆ: ಸರ್ವೆ ರೇಖೆಯು ಸರ್ವೆಸ್ಥಳ 11 ರಿಂದ ಸರ್ವೆ ನಂಬರ್ 22 ಮತ್ತು 23ರ ಉತ್ತರ ರೇಖೆಯಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸಿ ಸರ್ವೆ ನಂ.23ರ ವಾಯುವ್ಯಮೂಲೆ ಸೇರಿ ನಂತರ ಸರ್ವೆ ನಂ.9 ಪೂರ್ವರೇಖೆಯಲ್ಲಿ ಈಶಾನ್ಯಮೂಲೆ ಸೇರಿ ನಂತರ ಸದರಿ ಸರ್ವೆ ನಂಬರಿನ ಉತ್ತರರೇಖೆಯಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸಿ ಸದರಿ ಸರ್ವೆ ನಂಬರಿನ ವಾಯುವ್ಯಮೂಲೆ ಸೇರಿ ನಂತರ ವಾಯುವ್ಯ ದಿಕ್ಕಿಗೆ ತಿರುಗಿ ಸರ್ವೆ ನಂಬರ್ 7ರ ವಾಯುವ್ಯ ಗಡಿರೇಖೆಯಲ್ಲಿ, ಸರ್ವೆಸ್ಥಳ 16ನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
11–12	266^0	4.50
12–13	280^0	6.50
13–14	20^0	5.00
14–15	270^0	6.00
15–16	280^0	4.00

ಪಶ್ಚಿಮಕ್ಕೆ: ಸರ್ವೆ ರೇಖೆಯು ಸರ್ವೆ ಸ್ಥಳ 16 ರಿಂದ ಸರ್ವೆ ನಂಬರ್ 7ರ ವಾಯುವ್ಯ ಗಡಿರೇಖೆಯಲ್ಲಿ ಈಶಾನ್ಯಾಭಿಮುಖವಾಗಿ ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಚಲಿಸಿ ಪ್ರಾರಂಭಿಕ ಸ್ಥಳ 1ನ್ನು ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
16–17	51^0	6.00
17–18	51^0	6.00
18–19	50^0	5.00
19–20	37^0	6.00
20–21	37^0	7.00
21–22	37^0	7.50
22–01	37^0	7.00

ಉತ್ತರಕ್ಕೆ: ಸರ್ವೆ ರೇಖೆಯು ಚೀಲೇನಹಳ್ಳಿ ಗ್ರಾಮದ ಪಶ್ಚಿಮ ಗಡಿ, ರೇಖೆ ಮತ್ತು ಸುತ್ತಳ್ಳಿ ಗ್ರಾಮ ಸ.ನಂ.7ರ ಪೂರ್ವಾಗ್ರ ಮೂಲೆ ಸೇರುವ ಬಾಂದ್‌ನಿಂದ ವಾಯುವ್ಯಕ್ಕೆ ಸುಮಾರು 3.75 ಚೈನುಗಳ ದೂರದಿಂದ ಸರ್ವೆ ಸ್ಥಳ 23 ರಿಂದ ಪ್ರಾರಂಭಗೊಂಡು ಸದರಿ ಸ.ನಂ.7ರ ಪೂರ್ವಾಗ್ರಮೂಲೆಯನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
23–24	110^0	4.00

ಪೂರ್ವಕ್ಕೆ: ಸರ್ವೆ ರೇಖೆಯು ಸ್ಥಳ 24 ರಿಂದ ಸುತ್ತಳ್ಳಿ ಸರ್ವೆ ನಂಬರ್ 7ರ ಪೂರ್ವಗಡಿರೇಖೆಯಲ್ಲಿ ನೈರುತ್ಯಾಭಿಮುಖವಾಗಿ ಹೊರಟು ಸರ್ವೆ ನಂಬರ್ 7ರ ಆಗ್ನೇಯ ಮೂಲೆ ಸ್ಥಳ 39ನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
24–39	203^0	91.00

ದಕ್ಷಿಣಕ್ಕೆ: ಸರ್ವೆ ರೇಖೆಯು ಸರ್ವೆ ಸ್ಥಳ 39 ರಿಂದ ಸರ್ವೆ ನಂ.7ರ ದಕ್ಷಿಣ ಗಡಿರೇಖೆಯಲ್ಲಿ ಪಶ್ಚಿಮಾಭಿಮುಖವಾಗಿ ಹೊರಟು ಸದರಿ ಗಡಿ ರೇಖೆಯಲ್ಲಿ ಸರ್ವೆ ಸ್ಥಳ 40ನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
39–40	300^0	5.00

ಪಶ್ಚಿಮಕ್ಕೆ: ಸರ್ವೆ ರೇಖೆಯು ಸರ್ವೆ ಸ್ಥಳ 40 ರಿಂದ ಈಶಾನ್ಯಾಭಿಮುಖ, ವಾಯುವ್ಯಾಭಿಮುಖ, ಉತ್ತರಾಭಿಮುಖ ಹೀಗೆ ಸರ್ವೆ ನಂಬರ್. 7ರಲ್ಲಿ ಕ್ರಮವಾಗಿ ಹೊರಟು ಪ್ರಾರಂಭಿಕ ಸ್ಥಳ 1ನ್ನು ಈ ಕೆಳಕಂಡ ಕೋನ ಮತ್ತು ದೂರಗಳಲ್ಲಿ ಸೇರುತ್ತದೆ.

ಕಲ್ಲುಕಂಬ	ಕೋನ (ಡಿಗ್ರಿಗಳಲ್ಲಿ)	ದೂರ (20 ಮೀ.ಸರಪಳಿಗಳಲ್ಲಿ)
40–41	550^0	3.00
41–42	339^0	7.00
42–43	5^0	6.00
43–44	11^0	6.00
44–45	1^0	6.00
45–46	49^0	5.00
46–47	356^0	7.50
47–48	340^0	6.00
48–49	16^0	7.50
49–50	15^0	4.00
50–51	48^0	4.50
51–52	62^0	4.50
52–53	88^0	4.00
53–54	90^0	9.00
54–55	72^0	9.00
55–56	27^0	3.00
56–57	29^0	3.00
57–58	338^0	9.00
58–59	26^0	6.00
59–60	78^0	4.00
60–23	360^0	3.50

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ವಿ. ಜಯಲಕ್ಷ್ಮಿ

ಪಿ.ಆರ್.220

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ:26:ಎಲ್‌ಜಿಸಿ:2011, ಬೆಂಗಳೂರು, ದಿನಾಂಕ:26.03.2011

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್ (1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ. ಸಂ.	ತಾಲ್ಲೂಕು	ಸದಸ್ಯರು	
1.	ಹೊನ್ನಾಳಿ	1) ಶ್ರೀ ಎಂ.ಪಿ. ರೇಣುಕಾಚಾರ್ಯ, ಶಾಸಕರು, ಹೊನ್ನಾಳಿ ಕ್ಷೇತ್ರ, ದಾವಣಗೆರೆ ಜಿಲ್ಲೆ.	ಅಧ್ಯಕ್ಷರು
		2) ಶ್ರೀ ಸತ್ಯನಾರಾಯಣ ಬಿನ್ ಕರಿಯಪ್ಪ, ಮಾಸ್ತರು, ಫಲವನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.	ಸದಸ್ಯರು (ಸಾಮಾನ್ಯ)
		3) ಶ್ರೀ ಎ.ಕೆ. ರುದ್ರೇಶ್ ಬಿನ್ ಎ.ಕೆ. ಕೃಷ್ಣನಗರ, ದಿಡಗೂರ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.	ಸದಸ್ಯರು (ಪ.ಜಾತಿ)
		4) ಶ್ರೀಮತಿ ಮಂಜುಳ ಕೋಂ ಹಾಲೇಶಪ್ಪ, ಬೀರಗೊಂಡನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.	ಸದಸ್ಯರು (ಮಹಿಳೆ)
		5) ತಹಶೀಲ್ದಾರ್, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಜಿ. ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್.296

WATER RESOURCES SECRETARIAT

NOTIFICATION

The draft of the following rules further to amend the Karnataka Irrigation (Levy of Water Rates) Rules, 1965, which the Government of Karnataka proposes to make in exercise of the powers conferred by Section 11 of the Karnataka Irrigation (Levy of Betterment Contribution and Water Rate) Act, 1957 (Karnataka Act 28 of 1957) is hereby published as required by sub-section (1) of section-11 of the said Act for the information of persons likely to be affected thereby and notice is hereby given that the said draft will be taken into consideration after fifteen days from the date of its publication in the official Gazette.

Any objections or suggestions which may be received by the State Government, from any person with respect to the said draft before the expiry of the period specified above, will be considered by the State Government. Objections and suggestions may be addressed to the Secretary to Government, Water Resources Department, Room No.305, 3rd Floor, Vikasa Soudha, Bangalore-560 001.

DRAFT RULES

1. Title and Commencement.- (1) These rules may be called the Karnataka Irrigation (Levy of Water Rates) (Amendment) Rules, 2010.

(2) They shall come into force from the date of their publication in the official Gazette.

2. Amendment of Rule-2.- In rule 2 of the Karnataka Irrigation (Levy of Water Rates) Rules, 1965 in clause (2B), after the words "or the Karnataka Neeravari Nigam", the words "or the Cauvery Neeravari Nigam Limited or any other body or corporation established by the State Government for this purpose" shall be inserted.

By Order and in the name of the Governor of Karnataka,

N.R. VIJAYASARATHI

Officer on Special Duty (Tech., MMI-3),

Water Resources Department.

PR-470

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ:25:ಎಲ್‌ಜಿಜೆ:2011, ಬೆಂಗಳೂರು, ದಿನಾಂಕ:26.03.2011

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್ (1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ವಿಜಾಪುರ ಜಿಲ್ಲೆ, ಸಿಂದಗಿ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ. ಸಂ.	ತಾಲ್ಲೂಕು	ಸದಸ್ಯರು	
1.	ಸಿಂದಗಿ	1) ಶ್ರೀ ರಮೇಶ ಬಿ. ಭೂಸನೂರ, ಶಾಸಕರು, ಸಿಂದಗಿ ತಾಲ್ಲೂಕು, ವಿಜಾಪುರ ಜಿಲ್ಲೆ.	ಅಧ್ಯಕ್ಷರು
		2) ಶ್ರೀ ನಾಗೇಶ ಚೆನ್ನಬಸಪ್ಪ ಶಾಬಾದಿ ಸಾ: ಮೊರಟಗಿ, ಸಿಂದಗಿ ತಾಲ್ಲೂಕು, ವಿಜಾಪುರ ಜಿಲ್ಲೆ	ಸದಸ್ಯರು (ಸಾಮಾನ್ಯ)
		3) ಶ್ರೀ ಭೀಮಣ್ಣ ನಿಂಗಪ್ಪ ಮಾದರ ಸಾ: ಬ್ಯಾಲಿಹಾಳ ಬಂಕಲಗಿ, ಸಿಂದಗಿ ತಾಲ್ಲೂಕು, ವಿಜಾಪುರ ಜಿಲ್ಲೆ.	ಸದಸ್ಯರು (ಪ.ಜಾತಿ)
		4) ಶ್ರೀಮತಿ ಶೋಭ ಶಿವಪುತ್ರಪ್ಪ ಕುಂಬಾರ, ಕುಂಬಾರಗಲ್ಲಿ, ಸಾ: ಸಿಂದಗಿ, ಸಿಂದಗಿ ತಾಲ್ಲೂಕು, ವಿಜಾಪುರ ಜಿಲ್ಲೆ.	ಸದಸ್ಯರು (ಮಹಿಳೆ)
		5) ತಹಶೀಲ್ದಾರ್, ಸಿಂದಗಿ ತಾಲ್ಲೂಕು, ವಿಜಾಪುರ ಜಿಲ್ಲೆ.	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಜಿ. ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್.297

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ:7:ಎಲ್‌ಜಿಜಿ:2011, ಬೆಂಗಳೂರು, ದಿನಾಂಕ:21.02.2011

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್ (1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ. ಸಂ.	ತಾಲ್ಲೂಕು	ಸದಸ್ಯರು	
1.	ಸುರಪುರ	1) ಶ್ರೀ ನರಸಿಂಹನಾಯಕ (ರಾಜುಗೌಡ), ಶಾಸಕರು, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.	ಅಧ್ಯಕ್ಷರು
		2) ಶ್ರೀ ಹನುಮಂತರಾಯಗೌಡ ತಂದೆ ಹೇಮರೆಡ್ಡಿಪಗೌಡ, ಸಾ:ಕುಪ್ಪಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.	ಸದಸ್ಯರು (ಸಾಮಾನ್ಯ)
		3) ಶ್ರೀ ಭೀಮಾಶಂಕರ, ಚಂದ್ರಪ್ಪ ಬಿಲ್ಲದ, ಸಾ: ಹಗನಾಪುರ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.	ಸದಸ್ಯರು (ಪ.ಜಾತಿ)
		4) ಶ್ರೀಮತಿ ಮಲ್ಲಮ್ಮ ರಾಮನಗೌಡ, ಮಾಲಿಪಾಟೀಲ ಸಾ: ದೇವಿಕೇರಾ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.	ಸದಸ್ಯರು (ಮಹಿಳೆ)
		5) ತಹಶೀಲ್ದಾರ್, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಜಿ. ಲಕ್ಷ್ಮೀನಾರಾಯಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3)

ಪಿ.ಆರ್.298

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ:8:ಎಲ್‌ಜಿಡಿ:2011, ಬೆಂಗಳೂರು, ದಿನಾಂಕ:23.02.2011

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್ (1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಧಾರವಾಡ ಜಿಲ್ಲೆ, ಕುಂದಗೋಳ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರ. ಸಂ.	ತಾಲ್ಲೂಕು	ಸದಸ್ಯರು	
1.	ಕುಂದಗೋಳ	1) ಶ್ರೀ ಎಸ್.ಆಯ್. ಚಿಕ್ಕನಗೌಡ್ರ, ಶಾಸಕರು, ಕುಂದಗೋಳ ತಾಲ್ಲೂಕು.	ಅಧ್ಯಕ್ಷರು
		2) ಶ್ರೀ ಕಲ್ಲಪ್ಪ ವೀರಭದ್ರಪ್ಪ ಸೊರಟೂರ, ಸಾ: ಯರಿನಾರಾಯಣಪೂರ, ತಾ:ಕುಂದಗೋಳ, ಜಿ: ಧಾರವಾಡ.	ಸದಸ್ಯರು (ಸಾಮಾನ್ಯ)
		3) ಶ್ರೀ ಹನುಮಂತಪ್ಪ ಫಕ್ಕೀರಪ್ಪ ಮೂಡಿಯಣ್ಣವರ, ಸಾ:ಯರಿಬೂದಿಹಾಳ, ಕುಂದಗೋಳ ತಾಲ್ಲೂಕು, ಜಿ: ಧಾರವಾಡ.	ಸದಸ್ಯರು (ಪ.ವರ್ಗ)

ಕ್ರ. ಸಂ.	ತಾಲ್ಲೂಕು	ಸದಸ್ಯರು	
		4) ಶ್ರೀಮತಿ ಮಾಣಿಕ್ಯ ಬಸಪ್ಪ ಚಿಲ್ಲೂರು, ಸಾ:ದೇವನೂರ, ಕುಂದಗೋಳ ತಾಲ್ಲೂಕು, ಜಿ: ಧಾರವಾಡ.	ಸದಸ್ಯರು (ಮಹಿಳೆ)
		5) ತಹಶೀಲ್ದಾರ್, ಕುಂದಗೋಳ ತಾಲ್ಲೂಕು, ಜಿ: ಧಾರವಾಡ.	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಜೆ. ಲಕ್ಷ್ಮೀನಾರಾಯಣ

ಪಿ.ಆರ್.299

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3)

FINANCE SECRETARIAT

NOTIFICATION No.FD 08 Sa.Vi.Yo2010, Bangalore, Dated:10.03.2011

Whereas, the draft of the following rules further to amend the Karnataka State Employees Group Insurance Scheme Rules, 1981 was published as required by clause (a) of sub-section (2) of section 3 of the Karnataka Civil Services Act, 1978 (Karnataka Act 14 of 1990) in Notification No.FD 8 Sa.Vi.Yo 2010, Dated:30th September, 2010 published in part-4A of the Karnataka Gazette Dated:21st October,2010 inviting objections or suggestions from all the persons likely to be affected thereby, and notice was given that the said draft will be taken into consideration after fifteen days from the date of its publication in the Official Gazette.

And whereas, the said Gazette was made available to the public on 21st October, 2010.

And whereas, no objections or suggestions have been received by the State Government.

Now, therefore, in exercise of the powers conferred by section 3 read with Section 8 of the Karnataka State Civil Services Act, 1978 (Karnataka Act 14 of 1990) the Government of Karnataka, hereby makes the following rules, further to amend the Karnataka State Employees Group Insurance Scheme Rules, 1981, namely:

RULES

1. Title and Commencement.- (1) These rules may be called the Karnataka State Employees Group Insurance Scheme (Amendment) Rules, 2011.

(2) They shall come into force from the date of their publication in the Official Gazette.

2. Amendment of rule 19.- In the Karnataka State Employees Group Insurance Scheme Rules, 1981, in rule 19, for the words "The Director of Small Savings is nominated as Administrator of the Scheme" the words "The Director of Karnataka Government Insurance Department is nominated as Administrator of the Scheme" shall be substituted.

By Order and in the name of the Governor of Karnataka,

N. SRINIVASA MURTHY

PR-232

Under Secretary to Government,

Finance Department (Admn. and Advances)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಸಿಆಸುಇ 4 ಎಸ್‌ಎಂಆರ್ 2011, ಬೆಂಗಳೂರು, ದಿನಾಂಕ:15.03.2011

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 3ರ ಖಂಡ (ಎಫ್‌ಎಫ್)ನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ನಿಯಮಗಳ ಷೆಡ್ಯೂಲ್–Iರ ಐಟಂ 261ರ ನಂತರ ಈ ಕೆಳಕಂಡ ಐಟಂನ್ನು ಸೇರ್ಪಡೆಗೊಳಿಸಿದೆ:

(262) ಗಿರಿಜ ಕ್ಲಿನಿಕ್, ಜನರಲ್ ಸರ್ಜಿಕಲ್ ಮತ್ತು ಮೆಟರ್ನಿಟಿ ನರ್ಸಿಂಗ್ ಹೋಂ, ಮುಖ್ಯರಸ್ತೆ, ದರ್ಬೆ, ಪುತ್ತೂರು–574202, ದಕ್ಷಿಣ ಕನ್ನಡ ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ. ಮಾರ್ಕಂಡೇಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು–2)

PERSONNEL AND ADMINISTRATIVE REFORMS SECRETARIAT

NOTIFICATION No.DPAR 4 SMR 2011, Bangalore, Dated:15.03.2011

In exercise of the powers conferred by clause (ff) of rule 3 of the Karnataka Government Servants' (Medical Attendance) Rules 1963, the Government of Karnataka hereby adds the following item after item 261 of Schedule 1 to the said rules, namely:-

(262) Girija Clinic, General Surgical & Maternity Nursing Home, Main Road, Darbe, Puttur-574202, Dakshina Kannada District.

By Order and in the name of the Governor of Karnataka,

P. MARKANDEYA

PR-203

Under Secretary to Government,

Department of Personnel and Administrative Reforms (Service Rules-2)